**ಹಿರಿಯ ದಿವಾಣಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ**

**ದಂಡಾಧಿಕಾರಿಗಳ ನ್ಯಾಯಾಲಯ, ತಿ. ನರಸೀಪುರ**

**ಸಿಸಿ ಸಂಖ್ಯೆ: 364/2023**

ಚಾ.ಸಾ–25, ಪ್ರಾ.ಸಾ–08

| | | |
|---|---|---|
| ಹೆಸರು | : | ಕೃಷ್ಣಪ್ಪ ಎನ್ ಜಿ |
| ತಂದೆಯ ಹೆಸರು | : | ಲೇಟ್ ಗಿರಿಯಪ್ಪ |
| ವಯಸ್ಸು | : | 51 |
| ವೃತ್ತಿ | : | ಉಪ ಪೊಲೀಸ್ ವರಿಷ್ಠಾಧಿಕಾರಿ, ರಾಜ್ಯಗುಪ್ತ ವಾರ್ತೆ, ಹಾಸನ |
| ವಾಸ | : | ಹಾಸನ |

**ದಿನಾಂಕ 21.02.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

[

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ**

ನಾನು ತಿ. ನರಸೀಪುರ ವೃತ್ತದಲ್ಲಿ ದಿನಾಂಕ 28.11.2020 ರಿಂದ 14.06.2021 ರವರೆಗೆ ವೃತ್ತ ನಿರೀಕ್ಷಕನಾಗಿ ಮತ್ತು ದಿನಾಂಕ 14.06.2021 ರಿಂದ 30.11.2022 ರವರೆಗೆ ತಿ. ನರಸೀಪುರ ಪೊಲೀಸ್ ಠಾಣೆಯಲ್ಲಿ ಪೊಲೀಸ್ ನಿರೀಕ್ಷನಾಗಿ ಕರ್ತವ್ಯ ನಿರ್ವಹಿಸಿದ್ದೆನು.

ದಿನಾಂಕ 17.07.2022 ರಂದು ಬೆಳಿಗ್ಗೆ 8.40 ಗಂಟೆ ಸಮಯದಲ್ಲಿ ನಾನು ಠಾಣಾಧಿಕಾರಿಯಾಗಿದ್ದಾಗ ಫ್ರಾಸಾ–1 ರವರು ಲಿಖಿತ ದೂರನ್ನು ನೀಡಿದ್ದು, ಅದನ್ನು ಸ್ವೀಕರಿಸಿರುತ್ತೇನೆ. ಅದರ ದೃಢೀಕೃತ ಪ್ರತಿಯನ್ನು ಈಗ ನೋಡಿ ಗುರುತಿಸಿರುತ್ತೇನೆ. ಅದು ಈಗಾಗಲೇ ನಿಪಿ.1 ಎಂದು ಗುರುತಿಸಲ್ಪಟ್ಟಿದೆ.

ಅದರ ಆಧಾರದ ಮೇಲೆ ಪ್ರಥಮ ವರ್ತಮಾನ ವರದಿಯನ್ನು ಅಪರಾಧ ಸಂಖ್ಯೆ 252/2022 ರಲ್ಲಿ ದಾಖಲಿಸಿ, ನ್ಯಾಯಾಲಯಕ್ಕೆ ಮತ್ತು

ಮೇಲಾಧಿಕಾರಿಗಳಿಗೆ ಸಲ್ಲಿಸಿರುತ್ತೇನೆ. ಅದರ ದೃಢೀಕೃತ ಪ್ರತಿಯನ್ನು ಈಗ ನೋಡಿ ಗುರುತಿಸಿರುತ್ತೇನೆ. ಅದನ್ನು ನಿಪಿ.3 ಎಂದು ಗುರುತಿಸಲಾಯಿತು.

ಅದೇ ದಿನ ಘಟನಾ ಸ್ಥಳಕ್ಕೆ ಭೇಟಿ ನೀಡಿ ಅಲ್ಲಿಗೆ ಶ್ವಾನ ದಳ ಮತ್ತು ಬೆರಳಚ್ಚು ತಜ್ಞರನ್ನು ಕರೆಸಿಕೊಂಡಿರುತ್ಧೇನೆ. ಸ್ಥಳದಲ್ಲಿ ಫ್ರಾಸಾ-1 ರವರು ಇದ್ದರು. ಅಲ್ಲಿದ್ದ ಪಂಚರಾದ ಫ್ರಾಸಾ-3 ಮತ್ತು ಚಾಸಾ-6 ರವರಿಗೆ ನೋಟೀಸ್ ನೀಡಿ, ಪಂಚರಾಗಿ ಬರಲು ಕೋರಿರುತ್ತೇನೆ. ಫ್ರಾಸಾ-1 ರವರು ತೋರಿಸಿದ ಮೇರೆಗೆ ಸ್ಥಳದಲ್ಲಿ ಪಂಚನಾಮವನ್ನು ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 12.30 ಗಂಟೆಯವರೆಗೆ ಜರುಗಿಸಿರುತ್ತೇನೆ. ಆ ವೇಳೆಗೆ ಪಂಚನಾಮದಲ್ಲಿ ನಮೂದಿಸಿರುವ ಒಟ್ಟು 7 ಸ್ವತ್ತುಗಳನ್ನು ಜಪ್ತಿಪಡಿಸಿರುತ್ತೇನೆ. ಅದರ ದೃಢೀಕೃತ ಪ್ರತಿಯನ್ನು ಈಗ ನೋಡಿ ಗುರುತಿಸಿರುತ್ತೇನೆ. ಅದು ಈಗಾಗಲೇ ನಿಪಿ.2 ಎಂದು ಗುರುತಿಸಲ್ಪಟ್ಟಿದೆ.

ಸದರಿ ಸ್ವತ್ತುಗಳನ್ನು ಸ್ವತ್ತಿನ ಪಟ್ಟಿಯಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

ಆರೋಪಿತರ ಪತ್ತೆಗಾಗಿ ಚಾಸಾ-11 ಮತ್ತು ಪೊಲೀಸ್ ಸಿಬ್ಬಂದಿಗಳನ್ನು ನೇಮಿಸಿರುತ್ತೇನೆ. ಅದೇ ದಿನ ಅನುಮಾನವಿರುವ ವ್ಯಕ್ತಿಗಳ ಮೊಬೈಲ್ ಸಂಖ್ಯೆಗಳನ್ನು ನೀಡುವಂತೆ ಮೈಸೂರಿನ ಪೊಲೀಸ್ ವರಿಷ್ಠಾಧಿಕಾರಿಗೆ ಕೋರಿ ಕೊಂಡಿರುತ್ತೇನೆ. ಅದೇ ದಿನ ಘಟನಾ ಸ್ಥಳದ ದೇವಸ್ಥಾನದ ಅರ್ಚಕರಾದ ರವಿ ಎಂ.ಡಿ., ನಂಜುಂಡಸ್ವಾಮಿ, ನಾಗರಾಜು, ಶಿವಕುಮಾರ್, ಜೀವನ್‌ಕುಮಾರ್

ಮತ್ತು ಮಹೇಶ್‌ಕುಮಾರ್ ಹಾಗೂ ಪ್ರಾಸಾ-2, 3 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ.

ದಿನಾಂಕ 18.07.2022 ರಂದು ಆರೋಪಿತರ ಪತ್ತೆಗಾಗಿ ನಾನು ಮತ್ತು ಸಿಬ್ಬಂದಿಗಳು ಮೂಗೂರು ಮತ್ತು ಮೂಗೂರಿನ ಸುತ್ತಮುತ್ತಲ ಪ್ರದೇಶಗಳನ್ನು ಹಾಗೂ ಅನುಮಾನವಿರುವ ವ್ಯಕ್ತಿಗಳನ್ನು, ಅಲೆಮಾರಿ ಜನಾಂಗದವನ್ನು ವಿಚಾರಿಸಲಾಗಿ ಘಟನೆಯ ಕುರಿತು ಯಾವುದೇ ಉಪಯುಕ್ತ ಮಾಹಿತಿ ದೊರೆತಿರುವುದಿಲ್ಲ.

ದಿನಾಂಕ19.07.2022 ರಂದು ಸಿ.ಡಿ.ಆರ್. ಮತ್ತು ತಾಂತ್ರಿಕ ಮಾಹಿತಿಯನ್ನು ಪಡೆದು ಅದನ್ನು ವಿವಿಧ ಆಯಾಮದಲ್ಲಿ ಪರಿಶೀಲಿಸಿ, ಆ ದಿನ ಮಧ್ಯಾಹ್ನ 3.30 ಗಂಟೆಗೆ ಆರೋಪಿತರ ಪತ್ತೆಗಾಗಿ ನಾನು, ಚಾಸಾ-11 ರಿಂದ 18 ರವರು ಸೇರಿ ಇಲಾಖಾ ಮತ್ತು ಖಾಸಗಿ ವಾಹನಗಳಲ್ಲಿ ಠಾಣೆಯಿಂದ ಹೊರಟು ಚಾಮರಾಜ ನಗರ ತಾಲ್ಲೂಕಿನ ಬಿಸಲವಾಡಿ ಗ್ರಾಮದ ಬಳಿ ಖಾಲಿ ಜಾಗದಲ್ಲಿ ಟೆಂಟ್ ಹಾಕಿದ್ದ ಪ್ರದೇಶಕ್ಕೆ ಹೋಗಿ ದಾಳಿ ಮಾಡಲಾಗಿ ಅಲ್ಲಿ ಆರು ಜನರಿದ್ದರು. ಅವರನ್ನು ವಿಚಾರಿಸಲಾಗಿ ಅವರು ಕಳ್ಳತನ ಮಾಡಿದ್ದ ಕುರಿತು ಮಾಹಿತಿ ನೀಡಿದ್ದರಿಂದ ಅವರನ್ನು ವಶಕ್ಕೆ ಪಡೆಯಲಾಯಿತು. ಸ್ಥಳದಲ್ಲಿದ್ದ ಅವರು ಕೃತ್ಯಕ್ಕೆ ಬಳಸಿದ್ದ ಪಂಚನಾಮದಲ್ಲಿ ನಮೂದಸಿರುವ ಸ್ವತ್ತುಗಳನ್ನು ಜಪ್ತಿಪಡಿಸಿ ಪಂಚನಾಮವನ್ನು ಮಧ್ಯಾಹ್ನ 3.40 ರಿಂದ 6.40 ಗಂಟೆ ಸಮಯದಲ್ಲಿ ಪ್ರಾಸಾ-4 ಮತ್ತು ಚಾಸಾ-8 ರವರ ಸಮಕ್ಷಮ ಜರುಗಿಸಲಾಯಿತು. ಅದರ ಪ್ರತಿಯನ್ನು

ಈಗ ನೋಡಿ ಗುರುತಿಸಿರುತ್ತೇನೆ. ಅದು ದೃಢೀಕೃತ ಪ್ರತಿಯಾಗಿರದ ಕಾರಣ ನಿಶಾನೆಯಾಗಿ ಗುರುತಿಸಲ್ಲ. ಆ ವೇಳೆಗೆ ಭಾವಚಿತ್ರಗಳನ್ನು ಪಡೆಯಲಾಯಿತು.

ಆನಂತರ ಆರೋಪಿತರನ್ನು ವಶಕ್ಕೆ ಪಡೆದು ಠಾಣೆಗೆ ಕರೆತಂದು ವಿಚಾರಿಸಿ ಅವರ ಹೇಳಿಕೆಗಳನ್ನು ಪಡೆಯಲಾಯಿತು. ಅವರ ವಿರುದ್ಧ ದಸ್ತಗಿರಿ ಕ್ರಮ ಜರುಗಿಸಲಾಯಿತು. ಜಪ್ತು ಪಡಿಸಿದ ಸ್ವತ್ತುಗಳನ್ನು ಸ್ವತ್ತು ಪಟ್ಟಿಯಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ಸಲ್ಲಿಸಲಾಯಿತು. ಚಾಸಾ-12, 14 ಮತ್ತು 16 ರವರ ಹೇಳಿಕೆಗಳನ್ನು ಪಡೆಯಲಾಯಿತು.

ದಿನಾಂಕ 20.07.2022 ರಂದು ಆರೋಪಿತರಾದ ಕಬ್ಬಾಳ್ ಮತ್ತು ಮಂಜು ರವರ ಹೇಳಿಕೆಯಂತೆ ಅವರು ತೋರಿಸಿದ ಪ್ರಕಾರ ಈ ಮೇಲೆ ಹೇಳಿದ ಬಿಸಿಲುವಾಡಿ ಗ್ರಾಮದ ಶೆಡ್ ಬಳಿ ಹೂತು ಇಟ್ಟಿದ್ದ ಪಂಚನಾಮದಲ್ಲಿ ನಮೂದಿಸಿರುವ ಆಭರಣಗಳನ್ನು ಪಂಚರಾದ ಪ್ರಾಸಾ-4 ಮತ್ತು ಚಾಸಾ-8 ರವರ ಸಮಕ್ಷಮ ಜಪ್ತುಪಡಿಸಿ ಪಂಚನಾಮವನ್ನು ಬೆಳಿಗ್ಗೆ 11.30 ರಿಂದ ಮಧ್ಯಾಹ್ನ 12.30 ಗಂಟೆ ಸಮಯದಲ್ಲಿ ಜರುಗಿಸಲಾಯಿತು. ಆ ವೇಳೆಗೆ ಭಾವಚಿತ್ರಗಳನ್ನು ಪಡೆಯಲಾಯಿತು. ಪಂಚನಾಮದ ಪ್ರತಿಯನ್ನು ಈಗ ನೋಡಿ ಗುರುತಿಸಿರುತ್ತೇನೆ. ಅದು ದೃಢೀಕೃತ ಪ್ರತಿಯಾಗಿರದ ಕಾರಣ ನಿಶಾನೆಯಾಗಿ ಗುರುತಿಸಿಲ್ಲ.

ಜಪ್ತು ಪಡಿಸಿದ ಸ್ವತ್ತುಗಳನ್ನು ಸ್ವತ್ತು ಪಟ್ಟಿಯಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ಸಲ್ಲಿಸಲಾಯಿತು. ಸದರಿ ಆರೋಪಿತರನ್ನು ಠಾಣೆಗೆ ವಾಪಸ್ಸು ಕರೆತಂದು ಮತ್ತು ಠಾಣಯಲ್ಲಿದ್ದ ಆರೊಪಿತರ ವಿರುದ್ಧ ದಸ್ತಗಿರಿ ಕ್ರಮ ಜರುಗಿಸಿ, ನ್ಯಾಯಾಲಯಕ್ಕೆ

ಹಾಜರುಪಡಿಸಿ, ದಿನಾಂಕ 20.07.2022 ರಿಂದ 22.07.2022 ರವರೆಗೆ ಪೊಲೀಸ್ ಅಭಿರಕ್ಷೆಗೆ ಅವರನ್ನು ಪಡೆಯಲಾಯಿತು.

ದಿನಾಂಕ 20.07.2022 ರಂದು ಚಾಸಾ-11, 24, ಪ್ರಾಸಾ-4 ಮತ್ತು ಚಾಸಾ-8 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ. ಅದೇ ದಿನ 1ನೇ ಆರೋಪಿತ ಕಬ್ಬಾಳ್ ಅಲಿಯಾಸ್ ಚಂದ್ರ ಮತ್ತು 2ನೇ ಆರೋಪಿತ ರಘು ರವರು ತಮ್ಮ ಹೇಳಿಕೆಗಳಲ್ಲಿ ಹೇಳಿದಂತೆ ತಿ. ನರಸೀಪುರ ಪಟ್ಟಣದ ಶ್ರೀ ಚೌಡೇಶ್ವರಿ ದೇವಸ್ಥಾನದಲ್ಲಿ ಹುಂಡಿ ಕಳವು ಮಾಡಿವುದು ಕಂಡು ಬಂದಿದ್ದರಿಂದ ಸದರಿ ಸ್ಥಳವನ್ನು 1ನೇ ಆರೋಪಿತನಿಂದ ಗುರುತಿಸಲು ಸ್ಥಳಕ್ಕೆ ನಾನು ಮತ್ತು ಸಿಬ್ಬಂದಿಗಳು ಸೇರಿ ಆತನನ್ನು ಸ್ಥಳಕ್ಕೆ ಕರೆದುಕೊಂಡು ಹೋಗಿರುತ್ತೇವೆ. ಆತನ ಮೂಲಕ ಘಟನಾ ಸ್ಥಳ ಮತ್ತು ಅಲ್ಲಿಂದ ಹುಂಡಿಯನ್ನು ಬಿಸಾಕಿದ್ದ ಸ್ಥಳವನ್ನು ಗುರುತಿಸಲಾಯಿತು.

ಅದೇ ದಿನ ಘಟನಾ ಸ್ಥಳವಾಗಿದ್ದ ಮೂಗೂರಿನ ಶ್ರೀ ತ್ರಿಪುರ ಸುಂದರಿ ದೇವಸ್ಥಾನಕ್ಕೆ ಭೇಟಿ ಮಾಡಿ ಅಲ್ಲಿ ಪಂಚರಾದ ಪ್ರಾಸಾ-6 ಮತ್ತು ಚಾಸಾ-10 ರವರ ಸಮಕ್ಷಮ ಪಂಚನಾಮವನ್ನು ಮಧ್ಯಾಹ್ನ 1.30 ರಿಂದ 2.15 ಗಂಟೆ ಸಮಯದಲ್ಲಿ ಜರುಗಿಸಲಾಯಿತು. ಸದರಿ ಪಂಚನಾಮ ಪ್ರತಿಯನ್ನು ಹಾಜರುಪಡಿಸಿರದ ಕಾರಣ ನಿಶಾನೆಯಾಗಿ ಗುರುತಿಸಿಲ್ಲ.

ಅದೇ ದಿನ 1ನೇ ಆರೋಪಿತ 2ನೇ ಆರೋಪಿತನೊಂದಿಗೆ ಸೇರಿಕೊಂಡು ಮೈಸೂರಿನ ಆಲನಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಮೋಟಾರ್ ಸೈಕಲ್ ಸಂಖ್ಯೆಕೆಎ-09/ಹೆಚ್‌ಜಡ್-9911 ನ್ನು ಕಳವು ಮಾಡಿದ್ದ ಕುರಿತು ಮೈಸೂರಿನ

ಯರಗನಹಳ್ಳಿ, ರಾಜ್‌ಕುಮಾರ್ ರಸ್ತೆಯ ಸ್ಥಳವನ್ನು 1ನೇ ಆರೋಪಿತನು ತೋರಿಸಿದ ಮೇರೆಗೆ ಅಲ್ಲಿ ಪಂಚನಾಮವನ್ನು ಜರುಗಿಸಲಾಯಿತು. ಅದರ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರದ ಕಾರಣ ಅದನ್ನು ನಿಶಾನೆಯಾಗಿ ಗುರುತಿಸಿಲ್ಲ. ನಂತರ1ನೇ ಆರೋಪಿತನನ್ನು ಠಾಣೆಗೆ ವಾಪಸ್ಸು ಕರೆತರಲಾಯಿತು.

ದಿನಾಂಕ 21.07.2022 ರಂದು 1ನೇ ಆರೋಪಿತ, 3ನೇ ಆರೋಪಿತ ಮಂಜು ಮತ್ತು 5ನೇ ಆರೋಪಿತ ಪಿಚ್ಚಗುನ್ನಾ ರವರನ್ನು ಚಾಮರಾಜನಗರ ತಾಲ್ಲೂಕಿನ ಅಗರ ಗ್ರಾಮದ ಇಂಡಿ ಮಾರಮ್ಮ ದೇವಸ್ಥಾನಕ್ಕೆ ಕರೆದುಕೊಂಡು ಹೋಗಿ, ಅಲ್ಲಿ ಅವರು ದೇವಸ್ಥಾನದ ಹುಂಡಿಯನ್ನು ಕಳವು ಮಾಡಿದ್ದ ಬಗ್ಗೆ ವಿಚಾರಿಸಿ ಅಲ್ಲಿ ಪಂಚನಾಮವನ್ನು ಜರುಗಿಸಿ, ಭಾವಚಿತ್ರವನ್ನು ಪಡೆಯಲಾಯಿತು. ಅದರ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರದ ಕಾರಣ ಅದನ್ನು ನಿಶಾನೆಯಾಗಿ ಗುರುತಿಸಿಲ್ಲ.

ಅದೇ ದಿನ ಚಾಮರಾಜನಗರ ತಾಲ್ಲೂಕಿನ ಬಂದೀಗೌಡನ ಹಳ್ಳಿಯ ಮಹದೇವಸ್ವಾಮಿ ರವರ ತೋಟದ ಮನೆಯಲ್ಲಿ 1 ಮತ್ತು 2ನೇ ಆರೋಪಿತರು ಮೋಟಾರ್ ಸೈಕಲ್ ಸಂಖ್ಯೆ ಟಿಎನ್–38/ಬಿಎಕ್ಸ್–8672 ನ್ನು ಕಳವು ಮಾಡಿದರ ಕುರಿತು ಪಂಚನಾಮವನ್ನು ಜರುಗಿಸಿ ಭಾವಚಿತ್ರವನ್ನು ಪಡೆಯಲಾಯಿತು. ಅದರ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರದ ಕಾರಣ ಅದನ್ನು ನಿಶಾನೆಯಾಗಿ ಗುರುತಿಸಿಲ್ಲ.

ನಂತರ ಠಾಣೆಗೆ ವಾಪಸ್ಸಾಗಿ ಚಾಸಾ-21, 22, 23, ಫ್ರಾಸಾ-2, 5 ಮತ್ತು 6 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ.

ಅದೇ ದಿನ ಆರೋಪಿತರಾದ ಪಿಚ್ಚಗುನ್ನಾ ಮತ್ತು ಬಸವರಾಜು ರವರು ನಂಜನಗೂಡು ತಾಲ್ಲೂಕಿನ ಚಿನ್ನದಗುಡಿ ಹುಂಡಿ ಗ್ರಾಮದ ರಾಮವ್ವ ದೇವಸ್ಥಾನದ ಹುಂಡಿ ಕಳವು ಮಾಡಿದ್ದರ ಕುರಿತು ಅವರ ಸಮಕ್ಷಮ ಪಂಚನಾಮವನ್ನು ಜರುಗಿಸಿ ಭಾವಚಿತ್ರಗಳನ್ನು ಪಡೆಯಲಾಯಿತು. ಅದರ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರದ ಕಾರಣ ಅದನ್ನು ನಿಶಾನೆಯಾಗಿ ಗುರುತಿಸಿಲ್ಲ.

ಅದೇ ದಿನ ಆರೋಪಿತನಾದ ಕಬ್ಬಾಬ್ ರವರು ನಂಜನಗೂಡು ತಾಲ್ಲೂಕಿನ ಚಾಮಲಾಪುರ ಹುಂಡಿ ಗ್ರಾಮದ ಶ್ರೀ ಶನೇಶ್ವರ ದೇವಸ್ಥಾನದ ಬಳಿ ಮೋಟಾರ್ ಸೈಕಲ್ ಸಂಖ್ಯೆ ಕೆಎ-55/ವೈ-7976 (ನಕಲು ಸಂಖ್ಯೆ ಕೆಎ-10-ಇಎ-8389) ಮತ್ತು ಕೆಎ-09/ಜೆಇ-9594 ನ್ನು ಕಳವು ಮಾಡಿದ್ದರ ಮತ್ತು ಅವುಗಳನ್ನು ಹಾಜರುಪಡಿಸಿದ್ದರ ಕುರಿತು ಅವರ ಸಮಕ್ಷಮ ಪಂಚನಾಮವನ್ನು ಜರುಗಿಸಿ, ಅವುಗಳನ್ನು ಜಪ್ತುಪಡಿಸಿ ಅವುಗಳ ಭಾವಚಿತ್ರಗಳನ್ನು ಪಡೆಯಲಾಯಿತು. ಅದರ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರದ ಕಾರಣ ಅದನ್ನು ನಿಶಾನೆಯಾಗಿ ಗುರುತಿಸಿಲ್ಲ.

ಮೂಗೂರು ದೇವಸ್ಥಾನದಲ್ಲಿ ಕಳವು ಮಾಡಿದ್ದ ಕೈ ಹಸ್ತ ಮತ್ತು ಮೂಗುತ್ತಿಯನ್ನು ಸದರಿ ಕಬ್ಬಾಬ್ ಕರಗಿಸಿ ಗಟ್ಟಿ ಮಾಡಿದ್ದು, ಅದನ್ನು ಸದರಿ ಶನೇಶ್ವರ ದೇವಸ್ಥಾನದ ಮೂಲೆಯಲ್ಲಿ ಹೂತಿ ಹಾಕಿದ್ದು, ಅದನ್ನು ಆತ

ತೋರಿಸಿದ್ದು, ಆ ಕುರಿತು ಈ ಮೇಲೆ ಹೇಳಿದ ಪಂಚನಾಮದಲ್ಲಿ ನಮೂದಿಸಲಾಗಿದೆ. ಆ ಕುರಿತು ಭಾವಚಿತ್ರವನ್ನು ಪಡೆಯಲಾಯಿತು. ಆ ಗಟ್ಟಿಯನ್ನು ಸ್ವತ್ತಿನ ಪಟ್ಟಿಯಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ಸಲ್ಲಿಸಲಾಯಿತು.

ನಂತರ ಮೈಸೂರಿನ ಶಕ್ತಿ ನಗರದ 3ನೇ ತಿರುವಿನ ಮನೆ ಸಂಖ್ಯೆ 877 ಕ್ಕೆ 1ನೇ ಆರೋಪಿತನೊಂದಿಗೆ ಭೇಟಿ ನೀಡಿ, ಆತ ಸದರಿ ಮನೆಯಿಂದ ಮೋಟಾರ್ ಸೈಕಲ್ ಸಂಖ್ಯೆ ಕೆಎ–11/ಇಎಸ್–2958 (ನಕಲು ಸಂಖ್ಯೆ ಕೆಎ–09/ಜೆಎಫ್–0325) ನ್ನು ಕಳವು ಮಾಡಿದ್ದಾಗಿ ಆತ ಹೇಳಿದ್ದು, ಅಲ್ಲಿ ಪಂಚನಾಮವನ್ನು ಜರುಗಿಸಿ, ಭಾವಚಿತ್ರಗಳನ್ನು ಪಡೆಯಲಾಯಿತು.

ನಂತರ ನಂಜನಗೂಡು ತಾಲ್ಲೂಕಿನ ಬಿಳಿಗೆರೆ ಪೊಲೀಸ್ ಠಾಣೆ ವ್ಯಾಪ್ತಿಯ ಎಸ್ ಹೊಸಕೋಟೆಯ ಮನೆಗೆ 1ನೇ ಆರೋಪಿತನೊಂದಿಗೆ ಭೇಟಿ ನೀಡಿ, ಆತ ಸದರಿ ಮನೆಯಿಂದ ಮೋಟಾರ್ ಸೈಕಲ್ ಸಂಖ್ಯೆ ಕೆಎ–55/ವೈ–7976 ನ್ನು (ನಕಲು ಸಂಖ್ಯೆ ಕೆಎ–10/ಇಎ–8389) ನ್ನು ಕಳವು ಮಾಡಿದ್ದಾಗಿ ಆತ ಹೇಳಿದ್ದು, ಅಲ್ಲಿ ಪಂಚನಾಮವನ್ನು ಜರುಗಿಸಿ, ಭಾವಚಿತ್ರಗಳನ್ನು ಪಡೆಯಲಾಯಿತು.

1ನೇ ಆರೋಪಿತನೊಂದಿಗೆ ಮತ್ತು ಸದರಿ ಶನೇಶ್ವರ ದೇವಸ್ಥಾನದ ಬಳಿ ಜಪ್ತಿಪಡಿಸಿಕೊಂಡ ಎರಡು ಮೋಟಾರ್ ಸೈಕಲ್‌ಗಳು ಮತ್ತು ಗಟ್ಟಿಯೊಂದಿಗೆ ಠಾಣೆಗೆ ವಾಪಸ್ಸಾಗಿರುತ್ತೇವೆ. ಅವುಗಳನ್ನು ಸ್ವತ್ತಿನ ಪಟ್ಟಿಯಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ಸಲ್ಲಿಸಲಾಯಿತು.

ದಿನಾಂಕ 22.07.2022 ರಂದು ಎಲ್ಲಾ ಆರೋಪಿತರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

ಸದರಿ ಗಟ್ಟಿಯನ್ನು ಹೊರತುಪಡಿಸಿ ಉಳಿದ ಆಭರಣಗಳನ್ನು ನ್ಯಾಯಾಲಯದ ಅನುಮತಿಯಂತೆ ಮೂಗೂರಿನ ದೇವಸ್ಥಾನದ ಅರ್ಚಕರಾದ ಪ್ರಾಸಾ–1 ರವರಿಗೆ ಬಿಡುಗಡೆ ಮಾಡಿರುತ್ತೇವೆ. ಈ ಮೇಲೆ ಹೇಳಿದಂತೆ ಬೇರೆ ಬೇರೆ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಜಪ್ತಿಪಡಿಸಿದ ಸ್ವತ್ತುಗಳನ್ನು ಆಯಾಯ ಪೊಲೀಸ್ ಠಾಣೆಗೆ ನ್ಯಾಯಾಲಯದ ಅನುಮತಿಯಂತೆ ವರ್ಗಾವಣೆ ಮಾಡಿರುತ್ತೇನೆ.

ದಿನಾಂಕ 14.09.2022 ರಂದು ಆರೋಪಿತರ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಈ ದಿನ ನ್ಯಾಯಾಲಯದಲ್ಲಿ 1ನೇ ಆರೋಪಿತ ಇರುತ್ತಾನೆ. ಉಳಿದ ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಬಿಡುಗಡೆ ಮಾಡಿದ ಆಭರಣಗಳನ್ನು ನೋಡಿದರೆ ಗುರುತಿಸುತ್ತೇನೆ.

**ಪಾಟೀ ಸವಾಲು : ಶ್ರೀ ಎಂ.ಆರ್. ವಕೀಲರಿಂದ 1ನೇ ಆರೋಪಿತನ ಪರವಾಗಿ**

ದೂರನ್ನು ನೀಡಲು ಪ್ರಾಸಾ–1 ರವರು ಒಬ್ಬರೇ ಬಂದಿರುತ್ತಾರೆ. ನಾವು ಮೂಗೂರು ದೇವಸ್ಥಾನಕ್ಕೆ ಪಂಚನಾಮ ಮಾಡಲು ಹೋದಾಗ ಬಹಳಷ್ಟು ಸಾರ್ವಜನಿಕರು ದೇವಸ್ಥಾನದ ಒಳಗೆ ಇದ್ದರು. ತಿ. ನರಸೀಪುರ ಪೊಲೀಸ್ ಠಾಣೆಯಿಂದ ಮೂಗೂರಿಗೆ ಸುಮಾರು 10 ಕಿ ಮೀ ಅಂತರವಿದೆ. ದೂರನ್ನು ನೀಡಿದ ಒಂದು ಗಂಟೆಯ ಒಳಗೆ ಆ ದೇವಸ್ಥಾನಕ್ಕೆ ಹೋಗಿದ್ದೆವು.

ಸಿ ಡಿ ಆರ್ ಮತ್ತು ತಾಂತ್ರಿಕ ಮಾಹಿತಿಯ ಆಧಾರದ ಮೇಲೆ ಆರೋಪಿತರ ಪತ್ತೆಯ ಕುರಿತು ನಮಗೆ ಮಾಹಿತಿ ಸಿಕ್ಕಿದೆ ಎಂದರೆ ಸರಿ. ಆರೋಪಿತರು ಗ್ಯಾಸ್, ಸ್ಟೌವ್ ಮತ್ತು ಕುಕ್ಕರ್ ರಿಪೇರಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಅವರು ಕೆಲಸಕ್ಕೆ ಹೋಗುವ ಜಾಗದಲ್ಲಿ ಟೆಂಟ್ ಹಾಕಿಕೊಳ್ಳುತ್ತಿದ್ದರು ಎಂದರೆ ಸರಿ. ಈ ಪ್ರಕರಣಕ್ಕೆ ಆರೋಪಿತರನ್ನು ಉದ್ದೇಶಪೂರ್ವಕವಾಗಿ ಸಿಲುಕಿಸಲಾಗಿದೆ ಎಂದರೆ ಸರಿಯಲ್ಲ. ನಾನು ಯಾವುದೇ ಪಂಚನಾಮವನ್ನು ಜರುಗಿಸಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಸ್ವತ್ತನ್ನು ಜಪ್ತಿಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿತರ ವಿರುದ್ಧ ಸುಳ್ಳು ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆ ನ್ಯಾದಲ್ಲಿ ಬೆರಳಚ್ಚುಗೊಳಿಸಲಾಯಿತು)
ಓ ಹೇ ಕೇ ಸರಿ ಇದೆ

**ಹಿರಿಯ ದಿವಾಣಿ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾದಂ., ತಿ.ನರಸೀಪುರ**

**<u>ಹಿರಿಯ ದಿವಾಣಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ</u>**

**<u>ದಂಡಾಧಿಕಾರಿಗಳ ನ್ಯಾಯಾಲಯ, ತಿ. ನರಸೀಪುರ</u>**

**ಸಿಸಿ ಸಂಖ್ಯೆ: 364/2023**

ಚಾ.ಸಾ–13, ಪ್ರಾ.ಸಾ–09

| | | |
|---|---|---|
| ಹೆಸರು | : | ಭಾಸ್ಕರ್ ಎಂ |
| ತಂದೆಯ ಹೆಸರು | : | ಲೇಟ್ ಎಂ.ಕೆ. ಮುದ್ದಲಿಂಗೇಗೌಡ |
| ವಯಸ್ಸು | : | 51 |
| ವೃತ್ತಿ | : | ಪೊಲೀಸ್ ಮುಖ್ಯಪೇದೆ,<br>ಇಲವಾಲ ಪೊಲೀಸ್ ಠಾಣೆ |
| ವಾಸ | : | ಮೈಸೂರು. |

**<u>ದಿನಾಂಕ 21.02.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

[

**<u>ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ</u>**

ನಾನು ತಿ. ನರಸೀಪುರ ವೃತ್ತದಲ್ಲಿ ಆಗಸ್ಟ್ 2020 ರಿಂದ ಜೂನ್ 2025 ರವರೆಗೆ ತಿ. ನರಸೀಪುರ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸಿದ್ದೆನು.

ದಿನಾಂಕ19.07.2022 ರಂದು ಮಧ್ಯಾಹ್ನ 3.30 ಗಂಟೆಗೆ ಆರೋಪಿತರ ಪತ್ತೆಗಾಗಿ ನಾನು, ಪ್ರಾಸಾ–8, ಚಾಸಾ–11, 12, 14 ರಿಂದ 16 ರವರು ಸೇರಿ ಇಲಾಖಾ ಮತ್ತು ಖಾಸಗಿ ವಾಹನಗಳಲ್ಲಿ ಚಾಮರಾಜ ನಗರ ತಾಲ್ಲೂಕಿನ ಬಿಸಲವಾಡಿ ಗ್ರಾಮದ ಬಳಿ ಇದ್ದ ಚರ್ಚ್ ಪಕ್ಕ ಖಾಲಿ ಜಾಗದಲ್ಲಿ ಟೆಂಟ್ ಹಾಕಿದ್ದ ಪ್ರದೇಶಕ್ಕೆ ಹೋಗಿ ದಾಳಿ ಮಾಡಲಾಗಿ ಅಲ್ಲಿ ಆರು ಜನರಿದ್ದರು. ಅವರನ್ನು ವಿಚಾರಿಸಲಾಗಿ ಅವರು ಕಳ್ಳತನ ಮಾಡಿದ್ದ ಕುರಿತು ಮಾಹಿತಿ ನೀಡಿದ್ದರಿಂದ ಅವರನ್ನು ವಶಕ್ಕೆ ಪಡೆಯಲಾಯಿತು.

ಸ್ಥಳದಲ್ಲಿದ್ದ 5 ಚಿಕ್ಕ ಗ್ಯಾಸ್ ಸಿಲೆಂಡರ್‌ಗಳು, ಆಮ್ಲಜನಕದ ಒಂದು ಸಿಲೆಂಡರ್, ಒಂದು ನೀಲಿ ಬಣ್ಣದ ಕಟ್ಟರ್, ಒಂದು ಹಾರೆ, ಎರಡು ಮಚ್ಚುಗಳು, ಒಂದು ಅಕ್ಸಿಲ್ ಬ್ಲೇಡ್, ಒಂದು ಸ್ಕ್ರೂ ಡ್ರೈವರ್, ಒಂದು ಗ್ಯಾಸ್ ಪೈಪ್, ಒಂದು ಗ್ಯಾಸ್ ಕಟ್ಟರ್, ಒಂದು ಪೆಟ್ಟಿಗೆ ಅದರಲ್ಲಿ ಬೆಳ್ಳಿ ಆಭರಣಗಳು (ಎರಡು ಚಿಕ್ಕ ಬಸವ, ಬಿಳಿ ಬಣ್ಣದ ಎರಡು ಕಣ್ಣುಗಳು, ಮಡಚಿದ ರೂಪದಲ್ಲಿದ್ದ ಎರಡು ತಟ್ಟೆಗಳು, ಚೂರಾದ 10 ಪದಾರ್ಥಗಳು), ವಿವಿಧ ಮುಖಬೆಲೆಯ ನಗದು ಮತ್ತು ನಾಣ್ಯ (ಒಟ್ಟು ರೂ.3,89,837-00 ನಗದು ಮತ್ತು ರೂ.16,344-00 ಚಿಲ್ಲರೆ), 3 ಮೋಟಾರ್ ಸೈಕಲ್‌ಗಳು (ಪಲ್ಸರ್ ಮೋಟಾರ್ ಸೈಕಲ್ ಸಂಖ್ಯೆ ಕೆಎ-09/ಜೆಇ-5161, ಬಜಾಜ್ ಸಿಟಿ-100 ಸಂಖ್ಯೆ ಕೆಎ-09/ಜೆಎಫ್-0325 ಮತ್ತು ಎಕ್ಸ್‌ಎಲ್ ಮೋಟಾರ್ ಸೈಕಲ್ ಸಂಖ್ಯೆ ಟಿಎನ್-38/ಬಿಎಕ್ಸ್-8672) ಹಾಗೂ ಟಚ್ ಸ್ಕ್ರೀನ್ ಮತ್ತು ಕೀ ಪ್ಯಾಡ್ ಸೇರಿ 22 ಮೊಬೈಲ್‌ಗಳು ಇದ್ದವು.

ಅವುಗಳನ್ನು ಜಪ್ತಿಪಡಿಸಿ ಪಂಚನಾಮವನ್ನು ಮಧ್ಯಾಹ್ನ 3.45 ರಿಂದ 6.30 ಗಂಟೆ ಸಮಯದಲ್ಲಿ ಫ್ರಾಸಾ-4 ಮತ್ತು ಚಾಸಾ-8 ರವರ ಸಮಕ್ಷಮ ಜರುಗಿಸಲಾಯಿತು. ಅದರ ಪ್ರತಿಯನ್ನು ಈಗ ನೋಡಿ ಗುರುತಿಸಿರುತ್ತೇನೆ. ಅದು ದೃಢೀಕೃತ ಪ್ರತಿಯಾಗಿರದ ಕಾರಣ ನಿಶಾನೆಯಾಗಿ ಗುರುತಿಸಿಲ್ಲ. ಆ ವೇಳೆಗೆ ಭಾವಚಿತ್ರಗಳನ್ನು ಪಡೆಯಲಾಯಿತು.

ಆನಂತರ ನಾವು ಆರೋಪಿತರು ಮತ್ತು ಈ ಮೇಲೆ ಹೇಳಿದ ಸ್ವತ್ತುಗಳೊಂದಿಗೆ ಠಾಣೆಗೆ ವಾಪಸ್ಸಾಗಿರುತ್ತೇವೆ.

ಸಿಸಿ ಸಂಖ್ಯೆ: **364/2023**

ಆರೋಪಿತರಾದ ಕಬ್ಬಾಳ್ ಮತ್ತು ಮಂಜು ರವರು ತಾವು ಕಳವು ಮಾಡಿದ್ದ ಆಭರಣಗಳನ್ನು ಈ ಮೇಲೆ ಹೇಳಿದ ಬಿಸಿಲುವಾಡಿ ಗ್ರಾಮದ ಶೆಡ್ ಬಳಿ ಹೂತಿಟ್ಟುರುವುದಾಗಿ ಹೇಳಿದ್ದು, ಅವುಗಳನ್ನು ತೋರಿಸುವುದಾಗಿ ಅವರು ಹೇಳಿದ್ದು, ಆ ಪ್ರಕಾರ ದಿನಾಂಕ 20.07.2022 ರಂದು ಬೆಳಿಗ್ಗೆ 11.00 ಗಂಟೆಗೆ ನಾನು, ಫ್ರಾಸಾ–8, ಚಾಸಾ–11, 12, 14, 15, ಫ್ರಾಸಾ–7 ಮತ್ತು ಸದರಿ ಆರೋಪಿತರು ಸೇರಿ ಸದರಿ ಸ್ಥಳಕ್ಕೆ ಹೋಗಿದ್ದು, ಅಲ್ಲಿಗೆ ಫ್ರಾಸಾ–4 ಮತ್ತು ಚಾಸಾ–8 ರವರನ್ನು ಬರಮಾಡಿಕೊಂಡೆವು.

ಅವರ ಸಮಕ್ಷಮ ಸದರಿ ಆರೋಪಿತರು ಹೂತು ಇಟ್ಟಿದ್ದ ಜಾಗವನ್ನು ತೆಗೆದಿದ್ದು, ಅಲ್ಲಿ ಚಿನ್ನದಂತಹ ಆಭರಣಗಳು ಇದ್ದು, ಅವುಗಳಲ್ಲಿ 2.8 ಗ್ರಾಂನ ಕೆಂಪು ಹರಳಿನ ಒಂದು ಹಣೆಬಟ್ಟು, 5.4 ಗ್ರಾಂನ ಕಣ್ಣುಬ್ಬು, 10 ಗ್ರಾಂನ ಒಂದು ಚಿಕ್ಕ ತಾಳಿ, 49.6 ಗ್ರಾಂನ 18 ಲಕ್ಷ್ಮಿ ಚಿತ್ರವಿರುವ ಕಾಸಿನ ಸರ ಮತ್ತು ಪೆಂಡೆಂಟ್, 51 ಗ್ರಾಂನ ಒಂದು ತಾಳಿಯ ಸಮೇತ ಸರ, 157 ಗ್ರಾಂನ ಕರಗಿಸಿದ್ದ ಅಭಯ ಮತ್ತು ವರಹಾ ಹಸ್ತಗಳು ಇದ್ದವು.

ಅವುಗಳನ್ನು ಫ್ರಾಸಾ–4 ಮತ್ತು ಚಾಸಾ–8 ರವರ ಸಮಕ್ಷಮ ಜಪ್ತುಪಡಿಸಿ ಪಂಚನಾಮವನ್ನು ಬೆಳಿಗ್ಗೆ 11.30 ರಿಂದ ಮಧ್ಯಾಹ್ನ 12.30 ಗಂಟೆ ಸಮಯದಲ್ಲಿ ಜರುಗಿಸಲಾಯಿತು. ಆ ವೇಳೆಗೆ ಭಾವಚಿತ್ರಗಳನ್ನು ಪಡೆಯಲಾಯಿತು. ಪಂಚನಾಮದ ಪ್ರತಿಯನ್ನು ಈಗ ನೋಡಿ ಗುರುತಿಸಿರುತ್ತೇನೆ. ಅದು ದೃಢೀಕೃತ ಪ್ರತಿಯಾಗಿರದ ಕಾರಣ ನಿಶಾನೆಯಾಗಿ ಗುರುತಿಸಿಲ್ಲ.

ನಂತರ ಸದರಿ ಆರೋಪಿತರು ಮತ್ತು ಆಭರಣಗಳೊಂದಿಗೆ ಠಾಣೆಗೆ ವಾಪಸ್ಸು ಆಗಿರುತ್ತೇವೆ.

**ಪಾಟೀ ಸವಾಲು : ಶ್ರೀ ಎಂ.ಆರ್. ವಕೀಲರಿಂದ 1ನೇ ಆರೋಪಿತನ ಪರವಾಗಿ**

ನಾವು ಸ್ಥಳಕ್ಕೆ ಹೋಗಿದ್ದ ಖಾಸಗಿ ವಾಹನದ ಸಂಖ್ಯೆ ನನಗೆ ನೆನಪಿಲ್ಲ. ಪಂಚನಾಮ ಸ್ಥಳಕ್ಕೆ ಹೋಗುವ ಪೂರ್ವದಲ್ಲಿ ಬೇರೆ ಸ್ಥಳಗಳಿಗೆ ಹೋಗಿರಲಿಲ್ಲ. ನಾನು ಹೇಳಿದಂತೆ ಸದರಿ ಸ್ಥಳದಲ್ಲಿ ಆರೋಪಿತರು ಇರಲಿಲ್ಲ ಮತ್ತು ನಾವು ಏನನ್ನೂ ಜಪ್ತಿಪಡಿಸಿಲ್ಲ ಎಂದರೆ ಸರಿಯಲ್ಲ. ಸ್ಥಳದಲ್ಲಿ ಪಂಚನಾಮ ಜರುಗಿಸಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆ ನ್ಯಾದಲ್ಲಿ ಬೆರಳಚ್ಚುಗೊಳಿಸಲಾಯಿತು)
ಓ ಹೇ ಕೇ ಸರಿ ಇದೆ

**ಹಿರಿಯ ದಿವಾಣಿ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾದಂ., ತಿ.ನರಸೀಪುರ**